



ಸಾಮಾಜಿಕ–ರಾಜಕೀಯ ವಲಯಗಳಲ್ಲಿ ಮಹಿಳೆಯರ ಪಾತ್ರ, ಪಾಡು ಚಿತ್ರಿಸುತ್ತಾರೆ. ದೇಶದ ಸಾಮಾಜಿಕ, ರಾಜಕೀಯ ಸಮಸ್ಯೆಗಳನ್ನು ಸೇತು ಸ್ತ್ರೀವಾದಿ ನೆಲೆಯಿಂದ ಒರೆಗಿಟ್ಟು ನೋಡುತ್ತಾರೆ. 'ಮೀಕು ಲಬ್ಬಂ' (2014) ಎಂಬ ತೆಲುಗು ಕಾದಂಬರಿಯಲ್ಲಿ ಲೇಖಕಿ ಚಂದ್ರಕಲಾ ಆಧುನಿಕ ಸಮಾಜದಲ್ಲಿ ಶಿಕ್ಷಣ, ಉದ್ಯೋಗ, ವಿವಾಹಗಳ ನಡುವೆ ಸಿಲುಕಿಕೊಂಡು ಮಹಿಳೆ ಎದುರಿಸುವ ಎಡರು ತೊಡರುಗಳನ್ನು ನಿರೂಪಿಸುತ್ತಾರೆ.

ಕನ್ನಡದಲ್ಲಿ ದು. ಸರಸ್ವತಿ ದಲಿತ ಮಹಿಳಾ ಸಾಹಿತ್ಯದಲ್ಲಿ ಹೊಸ ಹೆಜ್ಜೆಗಳನ್ನು ಮೂಡಿಸಿದವರು. 'ಹೆಣೆದರೆ ಜೇಡನಂತೆ' ಮತ್ತಿತರ ಕವನ ಸಂಕಲನಗಳು ಹಾಗೂ 'ಈಗೇನ್ ಮಾಡೀರಿ' ಎಂಬ ಅನುಭವ ಕಥನಗಳ ಮೂಲಕ ಮಹಿಳಾ ಮತ್ತು ದಲಿತ ಸಂವೇದನೆಗಳ ಹೊಸ ರೂಪಗಳನ್ನು ಕನ್ನಡದ ಓದುಗರಿಗೆ ತೆರೆದಿಟ್ಟವರು ಸರಸ್ವತಿ. ಕರ್ನಾಟಕ